# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೆಚ್‌ಐವಿ/ಏಡ್ಸ್ ಸೋಂಕಿತ ಮಕ್ಕಳು ಹಾಗೂ ಇಂತಹ ಕಾಯಿಲೆಯಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳ ಪಾಲನೆಯ ನಿಮಿತ್ತ ವಿಶೇಷ ಪಾಲನಾ ಯೋಜನೆಯ ಮಾರ್ಗಸೂಚಿಯನ್ನು ಪರಿಷ್ಕರಿಸುವ ಬಗ್ಗೆ

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಮಮಇ 03 ಮಭಾಬ 2012, ದಿನಾಂಕ: 20.07.2012
2. ಇದೇ ಸಮ ಸಂಖ್ಯೆ ಸರ್ಕಾರಿ ಆದೇಶ ದಿನಾಂಕ: 06.05.2017
3. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರ ಏಕ ಕ.ಎಸ್.ಐ.ಸಿ.ಪಿ.ಎಸ್/ವಿ.ಪಾ.ಯೋ/ಪಮಾ/04/2017-18 ದಿನಾಂಕ:05.06.2017

ಪ್ರಸ್ತಾವನೆ

ಹೆಚ್.ಐ.ವಿ/ಏಡ್ಸ್ ಸೋಂಕಿತ ಮಕ್ಕಳ ಹಾಗೂ ಇಂತಹ ಕಾಯಿಲೆಯಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳ ಪಾಲನೆಯ ನಿಮಿತ್ತ "ಮಕ್ಕಳಿಗಾಗಿ ವಿಶೇಷ ಪಾಲನಾ" ಯೋಜನೆಯನ್ನು 2009-10ನೇ ಸಾಲಿನಿಂದ ಜಾರಿಗೆ ತರಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಹೆಚ್.ಐ.ವಿ/ಏಡ್ಸ್ ಸೋಂಕಿತ ಮಕ್ಕಳ ಹಾಗೂ ಇಂತಹ ಕಾಯಿಲೆಯಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳ ಪಾಲನೆಯ ನಿಮಿತ್ತ "ಮಕ್ಕಳಿಗಾಗಿ ವಿಶೇಷ ಪಾಲನಾ" ಯೋಜನೆಯ ಮಾರ್ಗಸೂಚಿಯನ್ನು ಸಿದ್ಧಪಡಿಸಿ, ಸದರಿ ಮಾರ್ಗಸೂಚಿಯನುಸಾರ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ

ಮಕ್ಕಳಿಗಾಗಿ ವಿಶೇಷ ಪಾಲನಾ" ಯೋಜನೆಯಡಿ ತಂದೆ / ತಾಯಿ ಹೊಂದಿರುವ ಮಕ್ಕಳಿಗೆ ಮತ್ತು ಪ್ರಾಯೋಜಕತ್ವ ಸೇವೆಗಾಗಿ ಒಂದು ಮಗುವಿಗೆ ಮಾಸಿಕ ರೂ.650/- ಹಾಗೂ ತಂದೆ ತಾಯಿ ಇಲ್ಲದ ಮಕ್ಕಳಿಗೆ ಪ್ರಾಯೋಜಕತ್ವ ಸೇವೆಗಾಗಿ ಮಾಸಿಕ ರೂ,750/- ನೀಡಲಾಗುತ್ತಿದ್ದು, ಸದರಿ ಮೊತ್ತವನ್ನು 2017-18ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ರೂ.800 ರಿಂದ ರೂ.1000ಕ್ಕೆ ಹೆಚ್ಚಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ, ಈ ಕುರಿತು ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಲಾಗುವುದೆಂದು ಆದೇಶಿಸಿದೆ.

ಮೇಲಿನ ಅಂಶದ ಹಿನ್ನೆಲೆಯಲ್ಲಿ, ಹೆಚ್.ಐ.ವಿ/ಏಡ್ಸ್ ಸೋಂಕಿತ ಮಕ್ಕಳ ಹಾಗೂ ಇಂತಹ ಕಾಯಿಲೆಯಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳಿಗೆ ಪೌಷ್ಟಿಕ ಆಹಾರ, ಸೂಕ್ತ ವೈದ್ಯಕೀಯ ಚಿಕಿತ್ಸೆ ನೀಡುವುದರೊಂದಿಗೆ ಅವರನ್ನು ಶಿಕ್ಷಣದ ಮುಖ್ಯವಾಹಿನಿಯಲ್ಲಿ ತರಲು ಪ್ರಸ್ತುತ ಜಾರಿಯಲ್ಲಿರುವ ಮಾರ್ಗಸೂಚಿಯನ್ನು ಹಿಂಪಡೆದು ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಏಕ ಕಡತ ಪ್ರಸ್ತಾವನೆಯಲ್ಲಿ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರು ಸರ್ಕಾರವನ್ನು ಕೋರಿರುತ್ತಾರೆ.

ಮೇಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ : ಮಮಇ 87 ಮಭಾಬ 2017, ದಿನಾಂಕ :26.09.2017**

ಪ್ರಸ್ತಾವನೆಯ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹೆಚ್.ಐ.ವಿ/ಏಡ್ಸ್ ಸೋಂಕಿತ/ಬಾಧಿತ ಮಕ್ಕಳ ಹಾಗೂ ಏಡ್ಸ್‌ನಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳ ಪಾಲನೆಯ ನಿಮಿತ್ತ "ಮಕ್ಕಳಿಗಾಗಿ ವಿಶೇಷ ಪಾಲನಾ" ಯೋಜನೆಯ ಆರ್ಥಿಕ ನೆರವಿನ ಮೊತ್ತವನ್ನು 2017-18ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ರೂ.800 ರಿಂದ ರೂ.1000ಕ್ಕೆ ಹೆಚ್ಚಿಸಿರುವ ಆಧಾರದ ಮೇಲೆ, ಅನುಬಂಧದಲ್ಲಿ ತಿಳಿಸಿರುವಂತೆ ಪ್ರಸ್ತುತ ಜಾರಿಯಲ್ಲಿರುವ ಮಾರ್ಗಸೂಚಿಯನ್ನು ಹಿಂಪಡೆದು, ಪರಿಷ್ಕೃತ ಮಾರ್ಗಸೂಚಿಯನ್ನು ಅನುಬಂಧದಲ್ಲಿ ತಿಳಿಸಿರುವಂತೆ ರಚಿಸಿ ಆದೇಶಿಸಿದೆ.

Scanned with CamScanner

ಸದರಿ ಯೋಜನೆಯನ್ನು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರ ಮುಖಾಂತರ ಅನುಷ್ಠಾನಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಂಧ್ಯಾ ಎಲ್ ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.

ಪ್ರತಿಗಳು:

1. ಮಹಾಲೇಖಪಾಲರು, (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಆರ್ಥಿಕ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಸಾರಿಗೆ ಇಲಾಖೆ ಮತ್ತು ವಸತಿ ಇಲಾಖೆ.
3. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
4. ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
5. ಯೋಜನಾ ನಿರ್ದೇಶಕರು, ಕರ್ನಾಟಕ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು.
6. ದೇಶೀಯ ನಿರ್ದೇಶಕರು, ಕರ್ನಾಟಕ ಆರೋಗ್ಯ ಸಂವರ್ಧನ ಟ್ರಸ್ಟ್, ಬೆಂಗಳೂರು.
7. ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
8. ಎಲ್ಲಾ ಜಿಲ್ಲಾ ಉಪನಿರ್ದೇಶಕರು/ಸಹಾಯಕ ನಿರ್ದೇಶಕರು/ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
9. ಉಪ ನಿರ್ದೇಶಕರು, ಎನ್.ಎಂ.ಸಿ, ಖನಿಜ ಭವನ, ಬೆಂಗಳೂರು.
10. ಉಪ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ–10), ವಿಧಾನಸೌಧ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

(ಕ್ರಮ ಸಂಖ್ಯೆ 05 ರಿಂದ 08 ರವರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದ ಮುಖಾಂತರ ಹೊರಡಿಸುವುದು.)

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ,ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.

Scanned with CamScanner

ಸರ್ಕಾರಿ ಆದೇಶ ಸಂಖ್ಯೆ: ಮಮಇ 87 ಮಭಾಬ2017, ದಿನಾಂಕ 26.09.2017ಕ್ಕೆ ಅನುಬಂಧ

**ಏಡ್ಸ್‌ನಿಂದಾಗಿ ಪಾಲಕರನ್ನು ಕಳೆದುಕೊಂಡ ಅನಾಥ ಹಾಗೂ ಹೆಚ್.ಐ.ವಿ ಸೋಂಕಿತ/ಬಾಧಿತ ಸಂಕಷ್ಟದಲ್ಲಿರುವ ಮಕ್ಕಳ ಪಾಲನೆಗೆ ಬೆಂಬಲ ಒದಗಿಸುವ ವಿಶೇಷ ಪಾಲನಾ ಯೋಜನೆಯ ಪರಿಷ್ಕೃತ ಮಾರ್ಗಸೂಚಿ :**

0 ಯಿಂದ 18 ವರ್ಷದ ವರೆಗಿನ ಅನಾಥ ಹಾಗೂ ಸಂಕಷ್ಟದಲ್ಲಿರುವ ಹೆಚ್.ಐ.ವಿ ಸೋಂಕಿತ/ಬಾಧಿತ ಮಕ್ಕಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

**ಯೋಜನೆಯ ರೂಪುರೇಷೆಗಳು:**

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಜಾರಿಗೊಳಿಸುತ್ತಿರುವ ಕಾರ್ಯಕ್ರಮಗಳನ್ನು ಬಳಸಿಕೊಂಡ ನಂತರವೂ ಮಕ್ಕಳ ರಕ್ಷಣೆ ಮತ್ತು ಭದ್ರತೆ, ಪೌಷ್ಟಿಕ ಆಹಾರ, ಶಿಕ್ಷಣ ಹಾಗೂ ಪ್ರಾಸಂಗಿಕ ವೆಚ್ಚಗಳಲ್ಲಿ ಕೊರತೆಗಳು ಕಂಡುಬಂದಿರುವುದನ್ನು ಗುರುತಿಸಿ ಹಾಗೂ ಪರಿಶೀಲಿಸಿ, ಇವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರತಿ ಮಗುವಿನ ಅವಶ್ಯಕತೆಗಳನ್ನು ಪರಿಗಣನೆಗೆ ತೆಗೆದುಕೊಂಡು, ಮಕ್ಕಳಿಗಾಗಿ ವಿಶೇಷ ಪಾಲನಾ ಯೋಜನೆಯನ್ನು ರೂಪಿಸಲಾಗಿದ್ದು, ಸಾಂಸ್ಥಿಕ ಮತ್ತು ಅಸಾಂಸ್ಥಿಕ ರೂಪದಲ್ಲಿ ಯೋಜನೆಯು ಅನುಷ್ಠಾನಗೊಳುತ್ತದೆ.

**ಸಾಂಸ್ಥಿಕ ಸೇವೆ:**

ಮಕ್ಕಳನ್ನು ಆರೈಕೆ ಮಾಡಲು ಯಾವುದೇ ಕೌಟುಂಬಿಕ ವ್ಯವಸ್ಥೆ ಇಲ್ಲದ ಸಂದರ್ಭಗಳಲ್ಲಿ ಒದಗಿಸುವ ಸೇವೆ ಸಾಂಸ್ಥಿಕ ಸೇವೆಯಾಗಿರುತ್ತದೆ. ಸಾಂಸ್ಥಿಕ ಸೇವೆಯನ್ನು ಬಾಲ ನ್ಯಾಯ ಕಾಯ್ದೆಯಡಿ ಸ್ಥಾಪಿಸಲ್ಪಟ್ಟಿರುವ, ಮಕ್ಕಳ ಕಲ್ಯಾಣ ಸಮಿತಿ ಮುಂದೆ ಬಂದ ಮಕ್ಕಳನ್ನು ದೀರ್ಘಾವಧಿ ಪುನರ್ವಸತಿಗಾಗಿ ವಿಶೇಷ ಮಕ್ಕಳಿಗಾಗಿ ಇರುವ ಸಂಸ್ಥೆಗಳಿಗೆ ಮಕ್ಕಳನ್ನು ದಾಖಲಿಸಿದಲ್ಲಿ ಅಂತಹ ಮಕ್ಕಳ ನಿರ್ವಹಣೆಗಾಗಿ ಈ ಕೆಳಕಂಡ ನಿಬಂಧನೆಗೊಳಪಟ್ಟ ಸಂಸ್ಥೆಗಳಿಗೆ ಈ ಯೋಜನೆಯಡಿ ಆರ್ಥಿಕ ಸಹಾಯ ನೀಡುವುದು.

- ಬಾಲ ನ್ಯಾಯ ಕಾಯ್ದೆಯಡಿ ನೋಂದಣಿಯಾಗಿರಬೇಕು
- ಹೆಚ್.ಐ.ವಿ ಸೋಂಕಿತ ಮಕ್ಕಳಿಗೆ ಪುನರ್ವಸತಿ ನೀಡಲು ವಿಶೇಷ ಸಂಸ್ಥೆಯೆಂದು ಗುರುತಿಸಲ್ಪಟ್ಟಿರುವ ಸ್ವಯಂ ಸೇವಾ ಸಂಸ್ಥೆಯಾಗಿರಬೇಕು.
- ಸಂಸ್ಥೆ ನಡೆಸಲು ಸರ್ಕಾರದಿಂದ ಯಾವುದೇ ಇಲಾಖೆಗಳ ಮೂಲಕ ಅನುದಾನ ಪಡೆಯುತ್ತಿರಬಾರದು.

**ಅಸಾಂಸ್ಥಿಕ ಸೇವೆ:**

ಕೌಟುಂಬಿಕ ಸೇವೆ ಒದಗಿಸುವ ಅವಕಾಶಗಳಿದಂತಹ ಸಂದರ್ಭದಲ್ಲಿ ಒದಗಿಸುವ ಸೇವೆ ಅಸಾಂಸ್ಥಿಕ ಸೇವೆಯಾಗಿರುತ್ತದೆ. ಅಸಾಂಸ್ಥಿಕ ಸೇವೆಯ ಸೌಲಭ್ಯಗಳು ಈ ಕೆಳಗೆ ಸೂಚಿಸಿದವರಿಗೆ ಅನ್ವಯಿಸುತ್ತದೆ.



Scanned with CamScanner

- ಅನಾಥರು: ಏಡ್ಸ್ ನಿಂದ ಮರಣ ಹೊಂದಿದ ತಂದೆತಾಯಿಯರ 0–18 ವರ್ಷದ ಮಕ್ಕಳು
- ಹೆಚ್.ಐ.ವಿಗೆ ತೆರೆದವರು (exposed) : ಹೆಚ್ಐವಿ ಸೋಂಕಿತ ಮಹಿಳೆಗೆ ಹುಟ್ಟಿದ ಮಗು, 18 ತಿಂಗಳವರೆಗೆ ಮಗುವಿಗೆ ಸ್ಥಿತಿ ಬಗ್ಗೆ ಗೊತ್ತಾಗದೇ ಇರುವುದು.
- ಹೆಚ್.ಐ.ವಿ. ಸೋಂಕಿತರು(infected) ಹೆಚ್.ಐ.ವಿ ಪಾಸಿಟಿವ್ ಎಂದು ಗುರುತಿಸಿರುವ ಮಕ್ಕಳು.
- ಹೆಚ್.ಐ.ವಿ. ಬಾಧಿತರು (affected) ಹೆಚ್.ಐ.ವಿ. ಸೋಂಕಿತ ತಂದೆ ತಾಯಿಯರ ಮಕ್ಕಳು.

1. ಆರ್ಥಿಕ ಸೌಲಭ್ಯಗಳು (ಸಾಂಸ್ಥಿಕ ಹಾಗೂ ಅಸಾಂಸ್ಥಿಕ)

ಪ್ರತಿ ವಿಶೇಷ ಅಗತ್ಯವುಳ್ಳ ಮಗುವಿನ ರಕ್ಷಣೆ ಮತ್ತು ಪೋಷಣೆಗಾಗಿ, ಸಂಸ್ಥೆಗಳ ರಕ್ಷಣೆಯಲ್ಲಿರುವ ಮಗುವಿನ ಪೋಷಣೆಗಾಗಿ ಸಂಸ್ಥೆಗೆ ಹಾಗೂ ಕುಟುಂಬದ ರಕ್ಷಣೆಯಲ್ಲಿರುವ ಮಗುವಿಗೆ ನೇರವಾಗಿ ಮಾಸಿಕ ಗರಿಷ್ಠ ರೂ. 1000/- (ರೂಪಾಯಿ ಒಂದು ಸಾವಿರ ಮಾತ್ರ)ಗಳ ಆರ್ಥಿಕ ಸಹಾಯ ಒದಗಿಸುವುದು.

2. ಯೋಜನೆಗೆ ಒಳಪಡುವ ಮಕ್ಕಳನ್ನು ಗುರುತಿಸುವ ವಿಧಾನ :

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಐ.ಸಿ.ಟಿ.ಸಿ (Integrated councelling and testing center) ಹಾಗೂ ಎ.ಆರ್.ಟಿ. (Anti Retro Viral Therapy) ಕೇಂದ್ರಗಳಲ್ಲಿ ನೋಂದಣಿಯಾದ ಕುಟುಂಬಗಳ ಸಮೀಕ್ಷೆಯನ್ನು ನಡೆಸಿ, ಪ್ರತಿ ಕುಟುಂಬದ ಅವಶ್ಯಕತೆಯನ್ನು ಗುರುತಿಸಿ, ಸರ್ಕಾರದ ವಿವಿಧ ಯೋಜನೆಯಡಿ ಇರುವ ಸೌಕರ್ಯಗಳನ್ನು ಹೊರತುಪಡಿಸಿ, ಒದಗಿಸಬೇಕಾದ ಸೌಲಭ್ಯಗಳ ಬಗ್ಗೆ ವರದಿ ತಯಾರಿಸುವುದು.

ಸದರಿ ಕಾರ್ಯಕ್ಕೆ ಕರ್ನಾಟಕ ಆರೋಗ್ಯ ಸಂವರ್ಧನ ಪ್ರತಿಷ್ಠಾನ ಹಾಗು ಕರ್ನಾಟಕ ಏಡ್ಸ್ ನಿಯಂತ್ರಣ ಸೊಸೈಟಿಯು ತಾಂತ್ರಿಕ ಮಾರ್ಗದರ್ಶನದೊಂದಿಗೆ ಹಾಗೂ ಸಂಪರ್ಕ ಕಾರ್ಯಕರ್ತರು (Link Workers), ಆರೋಗ್ಯ ಸಹಾಯಕಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ಹಾಗು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸದರಿ ಕುಟುಂಬಗಳ ಆರ್ಥಿಕ ಸಾಮಾಜಿಕ ಸಮೀಕ್ಷೆಯನ್ನು ನಡೆಸಿ, ವಿಶೇಷಾ ಪಾಲನಾ ಯೋಜನೆಗೆ ಒಳಪಡುವ ಮಗುವಿಗೆ ಒದಗಿಸಬೇಕಾದ ಅವಶ್ಯಕತೆಗಳ ಬಗ್ಗೆ ವರದಿ ಸಿದ್ಧಪಡಿಸುವುದು. ಹೀಗೆ ವರದಿ/ಮಾಹಿತಿ ಸಿದ್ಧಪಡಿಸುವ ಜವಾಬ್ದಾರಿಯನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಹೊಂದಿರುತ್ತದೆ.

ಮೇಲೆ ತಿಳಿಸಿದಂತೆ ಪ್ರತಿ ಮಗುವಿನ ಅವಶ್ಯಕತೆ (Need based) ಆಧರಿಸಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸಿದ್ಧಪಡಿಸಿದ ಪ್ರಸ್ತಾವನೆಯನ್ನು ಸದಸ್ಯ ಕಾರ್ಯದರ್ಶಿಗಳು, ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರಿಗೆ ಸಲ್ಲಿಸಿ ಆರ್ಥಿಕ ಮಂಜೂರಾತಿ ಪಡೆಯುವುದು.

Scanned with CamScanner

## 3. ವಾರ್ಷಿಕ ಕ್ರಿಯಾ ಯೋಜನೆ ಹಾಗೂ ಅನುದಾನದ ಬಿಡುಗಡೆ:

- ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಪ್ರತಿ ವರ್ಷ ನವೀಕರಣಕ್ಕಾಗಿ ಹಾಗೂ ಹೊಸದಾಗಿ ಗುರುತಿಸಿದ ಕುಟುಂಬಗಳ ಸಮೀಕ್ಷೆ ನಡೆಸಿ, ಅವಶ್ಯಕತೆಗಳನ್ನು ಗುರುತಿಸಿ, ಬೇಡಿಕೆಯನ್ನು ಸಿದ್ಧಪಡಿಸಿ, ಪ್ರಾಯೋಜಕತ್ವ ಮತ್ತು ಫಾಸ್ಟರ್ ಕೇರ್ ಸಮಿತಿಯಿಂದ ಅನುಮೋದನೆ ಪಡೆದು ನಂತರ ಆಡಳಿತ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸೊಸೈಟಿಗೆ ಸಲ್ಲಿಸುವುದು.
- ~~ಸೊಸೈಟಿಯು ಪ್ರಸ್ತಾವನೆಯನ್ನು ಪರಿಶೀಲಿಸಿ ಆಡಳಿತ ಮಂಜೂರಾತಿ ನೀಡುತ್ತದೆ.~~ ಅನುಮೋದಿತ ಕ್ರಿಯಾ ಯೋಜನೆಯೊಂದಿಗೆ ಅನುದಾನವನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ ಬಿಡುಗಡೆ ಮಾಡುತ್ತದೆ.
- ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಅನುದಾನಕ್ಕೆ ಸೂಕ್ತ ದಾಖಲೆಗಳನ್ನು ನಿರ್ವಹಿಸಿ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರಿಂದ ಆರ್ಥಿಕ ಮಂಜೂರಾತಿ ಪಡೆಯುತ್ತದೆ.
- ಅನುದಾನವನ್ನು ವಿಶೇಷ ಮಕ್ಕಳಿಗಾಗಿ ಇರುವ ಸಂಸ್ಥೆಗಳಿಗೆ / ಫಲಾನುಭವಿಯ ಬ್ಯಾಂಕ್ ಖಾತೆಗೆ ನೇರವಾಗಿ ಆರ್‌ಟಿಜಿಎಸ್ ಮೂಲಕ ಬಿಡುಗಡೆ ಮಾಡುತ್ತದೆ.

## 4. ಆಡಳಿತ ವೆಚ್ಚ:

ಯೋಜನೆಯ ಅನುಷ್ಠಾನಕ್ಕೆ ಪೂರಕವಾಗಿ ದಾಖಲೀಕರಣದ ಅವಶ್ಯವಿದ್ದು, ಇದಕ್ಕಾಗಿ ಈ ಕೆಳಗಿನಂತೆ ಆಡಳಿತ ವೆಚ್ಚ ಭರಿಸಲು ಅವಕಾಶ ಒದಗಿಸಿದೆ.

1) ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಭರಿಸಬೇಕಾದ ವೆಚ್ಚ

- 100 ಕ್ಕಿಂತಕಡಿಮೆ ಮಕ್ಕಳು ಇದ್ದಲ್ಲಿ ವರ್ಷಕ್ಕೆ ರೂ. 12000/-
- 100 ರಿಂದ 250 ಮಕ್ಕಳು ಇದ್ದಲ್ಲಿ ವರ್ಷಕ್ಕೆ ರೂ. 18,000/-
- 250 ರಿಂದ 400 ಮಕ್ಕಳು ಇದ್ದಲ್ಲಿ ವರ್ಷಕ್ಕೆ ರೂ. 24,000/-
- 400 ಕ್ಕಿಂತ ಹೆಚ್ಚು ಮಕ್ಕಳು ಇದ್ದಲ್ಲಿ ವರ್ಷಕ್ಕೆ ರೂ. 30,000/-

2) ಯೋಜನೆಯಡಿ ಫಲಾನುಭವಿಗಳ ಮಾಹಿತಿಯನ್ನು ಗಣಕೀಕರಣ(Digitise) ಗೊಳಿಸಲು MIS ಅಭಿವೃದ್ಧಿ ಪಡಿಸಬೇಕಾಗಿದ್ದು, ಬಿಡುಗಡೆಯಾದ ಅನುದಾನದಲ್ಲಿ ಪ್ರಚಲಿತ ನಿಯಮದಂತೆ ಅನುದಾನ ಭರಿಸುವುದು.

## 5. ಯೋಜನೆಯ ಅನುಷ್ಠಾನದಲ್ಲಿ ಅನಸರಿಸಬೇಕಾದಂತಹ ವಿವಿಧ ಇಲಾಖೆಗಳು ಹಾಗೂ ಅವುಗಳ ಪಾತ್ರ:.

- **ಆರೋಗ್ಯ ಇಲಾಖೆ:** ಸಮೀಕ್ಷೆ ಆಧರಿಸಿ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವಲ್ಲಿ ನೆರವಾಗುತ್ತದೆ. ಜಿಲ್ಲಾ ಏಡ್ಸ್ ನಿಯಂತ್ರಣ ಘಟಕಗಳು ಸೌಲಭ್ಯಕ್ಕೆ ಅರ್ಹವಿರುವ ಕುಟುಂಬಗಳ ಮಾಹಿತಿಯನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಒದಗಿಸುವುದು.



Scanned with CamScanner

- **ಕರ್ನಾಟಕ ಏಡ್ಸ್ ನಿಯಂತ್ರಣ ಸೊಸೈಟಿ:** ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಮಾಹಿತಿಗಳನ್ನು ಒದಗಿಸುವುದು. ತರಬೇತಿ ನೀಡುವುದು, ಮಾರ್ಗದರ್ಶನ ಮಾಡುವ ಜವಾಬ್ದಾರಿ ಹೊಂದಿರುತ್ತದೆ.
- **ಕರ್ನಾಟಕ ಆರೋಗ್ಯ ಸಂವರ್ಧನ ಪ್ರತಿಷ್ಠಾನ:** ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಮಾಹಿತಿಗಳನ್ನು ಒದಗಿಸುವುದು, ತರಬೇತಿ ನೀಡುವುದು, ಮಾರ್ಗದರ್ಶನ ಮಾಡುವ ಜವಾಬ್ದಾರಿ ಹೊಂದಿರುತ್ತದೆ.
- ~~**ಶಿಕ್ಷಣ ಇಲಾಖೆ:** ಮಕ್ಕಳನ್ನು ಆದ್ಯತೆ ಮೇಲೆ ಅವಕಾಶವಿರುವ ಕಡೆ ಸರ್ಕಾರಿ/ಅನುದಾನಿತ ಶಾಲೆಗೆ ದಾಖಲೆ ಮಾಡಿಕೊಳ್ಳುವುದು.~~
- **ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಜಾತಿ ಹಾಗೂ ವರ್ಗಗಳ ಇಲಾಖೆ:** ಮಕ್ಕಳನ್ನು ಆದ್ಯತೆ ಮೇಲೆ ಅವಕಾಶವಿರುವ ಕಡೆ ವಸತಿ ನಿಲಯಗಳಿಗೆ ಹಾಗೂ ಸ್ವಯಂ ಸೇವಾ ಸಂಸ್ಥೆ ಮೂಲಕ ನಡೆಯುವ ಅನಾಥಾಲಯಗಳಿಗೆ ದಾಖಲೆ ಮಾಡಿಕೊಳ್ಳುವುದು.

ಮೇಲಿನ ಎಲ್ಲಾ ಇಲಾಖೆಗಳ ರಾಜ್ಯ, ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯತಿ/ಗ್ರಾಮ ಹಂತಗಳಲ್ಲಿ ಸಂಬಂಧಿಸಿದ ಅಧಿಕಾರಿಗಳು ಯೋಜನೆಯ ಅನುಷ್ಠಾನದಲ್ಲಿ ನೆರವಾಗಬೇಕಾಗುತ್ತದೆ.

(ಸಂಧ್ಯಾ ಎಲ್ ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕ ಸಬಲೀಕರಣ ಇಲಾಖೆ.

Scanned with CamScanner